ಜೆ ಇ ಇ ಮೇನ್ಸ್‌ನ ಫಲಿತಾಂಶದಲ್ಲಿ ವಶಿಷ್ಠ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳ ಭರ್ಜರಿ ವಿಜಯೋತ್ಸವ-ಶೂಭಾರೈಸಿದ ಆಡಳಿತ ಮಂಡಳಿ

ಬಳ್ಳಾರಿ ಏ -:2023-24ನೇ ಶೈಕ್ಷಣಿಕ ಸಾಲಿನಲ್ಲಿ ನಡೆದ ಜೆಇಇ ಮೇನ್ಸ್‌ನ ಪರೀಕ್ಷೆಯಲ್ಲಿ ಬಳ್ಳಾರಿ ನಗರದ ಪ್ರತಿಷ್ಠಿತ ವಶಿಷ್ಠ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಭರ್ಜರಿ ವಿಜಯೋತ್ಸವ ಸಾಧಿಸುವ ಮೂಲಕ ಕಾಲೇಜು ಪ್ರಾರಂಭಗೊಂಡ ನಾಲ್ಕನೇಯ ವರ್ಷದಲ್ಲೇ ಬಳ್ಳಾರಿ ಜಿಲ್ಲೆಯಲ್ಲಿಯೇ ಪ್ರತಿ ವರ್ಷದಂತೆ ಈ ವರ್ಷವೂ ಸಹ ಅತ್ಯುತ್ತಮ ಫಲಿತಾಂಶವನ್ನು ನೀಡಿ ಬಳ್ಳಾರಿ ಜಿಲ್ಲೆಗೆ ಪ್ರಥಮ ಸ್ಥಾನವನ್ನು ಗಳಿಸಿ ಕಾಲೇಜಿನ ಕೀರ್ತಿ ಪತಾಕೆಯನ್ನು ಎತ್ತಿಹಿಡಿದಿದ್ದಾರೆ ಎಂದು ಆಡಳಿತ ಮಂಡಳಿ ಶೂಭಾರೈಸಿದೆ.

1) ಕುಮಾರ: ವಿಕ್ರಂ ಸೂರ್ಯ ಎಸ್ ಎಮ್ - (App. No: 240311140398) 99.89 ಪರ್ಸ್‌ಂಟೈಲ್,2) ಕುಮಾರಿ: ಚಿನ್ಮಯಿ ಎಮ್- (App. No: 240310252602) 99.81 ಪರ್ಸ್‌ಂಟೈಲ್ ಈ ಇಬ್ಬರು ವಿದ್ಯಾರ್ಥಿಗಳು ಅತ್ಯುತ್ತಮ ಪರ್ಸ್‌ಂಟೈಲ್ ಪಡೆಯುವುದರೊಂದಿಗೆ ಬಳ್ಳಾರಿ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿದ್ದಾರೆ ಎಂದು ತಿಳಿಸಲು ಸಂತೋಷವಾಗುತ್ತದೆ.

ಅದೇ ರೀತಿ ಇನ್ನು ಅನೇಕ ವಿದ್ಯಾರ್ಥಿಗಳು ಅತ್ಯುತ್ತಮ ಪರ್ಸ್‌ಂಟೈಲ್ ಪಡೆದಿದ್ದು ಆ ವಿದ್ಯಾರ್ಥಿಗಳ ವಿವರ ಈ ಕೆಳಗಿನಂತೆ ಇವೆ.3) ಕುಮಾರ: ಉತ್ಕರ್ಷ ಡಿ - (App. No: 240310357649) ▯ 98.48 ಪರ್ಸ್‌ಂಟೈಲ್ ಪಡೆದಿದ್ದಾನೆ, 4) ಪ್ರಮೋದ್ ಡಿ - (App. No: 240320272060) - 97.67 ಪರ್ಸ್‌ಂಟೈಲ್,5) ಹಫೀಜಾ ಪಿ - (App. No: 240310860505) - 96.22 ಪರ್ಸ್‌ಂಟೈಲ್,6) ಅಮೋಘ ಕೆ.ಎಚ್ - (App. No 240310978899) 94.91 ಪರ್ಸ್‌ಂಟೈಲ್,7) ಎಚ್ ಜೆ ಪ್ರದುಮ್ನ - (App. No: 240311405576) ▯ 94.60 -ಪರ್ಸ್‌ಂಟೈಲ್,8) ಕೃಷ್ಣ ಕೌಶಿಕ್ ರೆಡ್ಡಿ ಕೆ- (App. No: 240310436887) - 94.27 ಪರ್ಸ್‌ಂಟೈಲ್,9) ಶ್ರೇಯಾ ಎಮ್ ಜೋಷಿ (App. No 240310483272) 94.02 ಪರ್ಸ್‌ಂಟೈಲ್,10) ಬಸವರಾಜ್ ಬಿ (App. No 240311306368) 93.60ಪರ್ಸ್‌ಂಟೈಲ್,11) ಸಂಜಿತ್ ತರಿಗೊಪುಲಾ ((App. No 240310277313)-93.34 ಪರ್ಸ್‌ಂಟೈಲ್,90 ಕಿಂತ ಹೆಚ್ಚು ಪರ್ಸ್‌ಂಟೈಲ್ ಪಡೆದ ವಿದ್ಯಾರ್ಥಿಗಳು ಒಟ್ಟು : 31 (Above 90 percentile : 31 Students)

(Below 10K ALL INDIAN RANK - 10 Students)

ಇನ್ನು ಅನೇಕ ವಿದ್ಯಾರ್ಥಿಗಳು ಅತ್ಯುತ್ತಮ ಪರ್ಸ್‌ಂಟೈಲ್ ಪಡೆದು ಕಾಲೇಜಿನ ಕೀರ್ತಿಯನ್ನು ಎತ್ತಿಹಿಡಿದ್ದಾರೆ.

ಬಳ್ಳಾರಿ ಜಿಲ್ಲೆಯಲ್ಲಿಯೇ ಅದ್ಭುತ ಸಾಧನೆ ಮಾಡಿದ ಈ ಎಲ್ಲಾ ವಿದ್ಯಾರ್ಥಿಗಳಿಗೆ ಕಾಲೇಜಿನ ಆಡಳಿತ ಮಂಡಳಿಯ ಪರವಾಗಿ ಪ್ರಾಂಶುಪಾಲರಾದ ಶ್ರೀ ಕೆ ರಮೇಶ ರಡ್ಡಿಯವರು ವಿದ್ಯಾರ್ಥಿಗಳಿಗೆ ಅಭಿನಂದನೆಯನ್ನು ತಿಳಿಸಿದ್ದಾರೆ. ಈ ಯಶಸ್ವಿಗೆ ಕಾರಣರಾದ ಕಾಲೇಜಿನ ಉಪನ್ಯಾಸಕರು, ಸಿಬ್ಬಂದಿಯವರು, ಮತ್ತು ವಿದ್ಯಾರ್ಥಿಗಳ ಪಾಲಕರು ಹಾಗೂ ಪೋಷಕರಿಗೆ ಕಾಲೇಜಿನ ಆಡಳಿತ ಮಂಡಳಿಯ ಪರವಾಗಿ ಪ್ರಾಂಶುಪಾಲರಾದ ಕೆ ರಮೇಶ ರೆಡ್ಡಿಯವರು ಅಭಿನಂದನೆಗಳನ್ನು ತಿಳಿಸಿದ್ದಾರೆ.

ಸಂಡೂರು ತಾಲ್ಲೂಕಿನ ಕಾಂಗ್ರೆಸ್ ಮುಖಂಡರು ಶ್ರೀರಾಮುಲು ಸಮ್ಮುಖದಲ್ಲಿ ಬಿಜೆಪಿಗೆ ಸೇರ್ಪಡೆ

ಬಳ್ಳಾರಿ ಏ -: ಲೋಕಸಭಾ ಚುನಾವಣೆ ಪ್ರಯುಕ್ತ ಸಂಡೂರು ತಾಲ್ಲೂಕಿನ ಕಾಂಗ್ರೆಸ್ ಮುಖಂಡರು ಶ್ರೀರಾಮುಲು ಸಮ್ಮುಖದಲ್ಲಿ ಅನೇಕ ಮಂದಿ ಬಿಜೆಪಿಯ ಅಭ್ಯರ್ಥಿಯನ್ನು ಪ್ರಚಂಡ ಬಹುತದಿಂದ ಗೆಲ್ಲಿಸಿ, ನರೇಂದ್ರ ಮೋದಿ ಅವರನ್ನು ಮೊತ್ತೋಮೆ ಪ್ರಧಾನ ಮಂತ್ರಿ ಮಾಡಲು ಅನೇಕ ಕಾಂಗ್ರೇಸ್ ಮುಖಂಡರು ಕಾರ್ಯಕರ್ತರು ತಮ್ಮ ಪಕ್ಷವನ್ನು ತೊರೆದು ಸಂಡೂರು ಮಂಡಲ ಅಧ್ಯಕ್ಷರಾದ ನಾನಾ ಸಾಹೇಬ್, ನಕ್ಕಂ ಜೀ, ಮತ್ತು ತಿಪ್ಪನಮರಡಿ ಸಿದ್ದಪ್ಪ, ಅವರ ನೇತೃತ್ವದಲ್ಲಿ ಅನೇಕ ಮಂದಿ ಬಿ.ಜೆ.ಪಿ ಗೆ ಸೇರ್ಪಡೆಯಾಗಿದ್ದಾರೆ.ಈ ಸಂದರ್ಭದಲ್ಲಿ ಮಂಡಲ ಉಪಾಧ್ಯಕ್ಷರಾದ ನರಸಿಂಹ,ಚೋರನೂರು ಯುವ ಮುಖಂಡರಾದ ಯರಿಸ್ವಾಮಿ,ಹೆಚ್.ಕೆ ಹಳ್ಳಿ.ನವೀನ್ ಕುಮಾರ್,ಮಂಡಲ ಪ್ರಧಾನ ಕಾರ್ಯದರ್ಶಿಯಾದ ಪ್ರವೀಣ್ ಕುಮಾರ್,ಲಕ್ಕಜ್ಜರ ಮಂಜುನಾಥ, ಕುಮಾರಸ್ವಾಮಿ, ಮರಿಯಪ್ಪ,ಚೌಡಪ್ಪ,ಮಾರಪ್ಪ,ಬಡಲಡಿಕೆ ಯರಿಸ್ವಾಮಿ, ಈರಣ್ಣ,ವಡ್ರಿ ಮಾಚರ ಹನುಮಂತಪ್ಪ,ಜಗದಪ್ಪ ಹನುಮಂತಪ್ಪ, ನಾಗರಾಜ್,ವಚಗೌಡ ಬಸಪ್ಪ,ತಿಪ್ಪನ ಮರಡಿ ಗ್ರಾಮದ ಯುವ ಮುಖಂಡರಾದ ಎರಿಸ್ವಾಮಿ,ಯುವಕರು ಮತ್ತು ಹಿರಿಯರು & ಕಾರ್ಯಕರ್ತರು ಉಪಸ್ಥಿತರಿದ್ದರು.

ಬಳ್ಳಾರಿ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ತುಕಾರಾಮ್ ಬಿರುಸಿನ ಪ್ರಚಾರ

ಬಳ್ಳಾರಿ ಏ -: ಬಳ್ಳಾರಿ ಲೋಕಸಭಾ ಕ್ಷೇತ್ರ ಕಾಂಗ್ರೆಸ್ ಅಭ್ಯರ್ಥಿಯಾದ ಈ.ತುಕಾರಾಂ ಅವರು ಬಳ್ಳಾರಿಯ ಎ.ಪಿ.ಎಂ.ಸಿ .ತರಕಾರಿ ಮಾರುಕ ಟ್ಟೆಯಲ್ಲಿ ಭರ್ಜರಿ ಮತಯಾಚನೆ ಮಾಡಿ ದರು. ಈ ಸಂದರ್ಭದಲ್ಲಿ ಬಳ್ಳಾರಿ ನಗರ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷರು ಜೆ.ಎಸ್ .ಆಂಜನೇಯಲು, ಮಾಜಿ ವಿಧಾನ ಪರಿಳತ್ ಸದಸ್ಯರು ಕೆ.ಎಸ್.ಎಲ್ .ಸ್ವಾಮಿ,ವೆಂಕಟೇಶ್ ಹೆಗಡೆ,ಕಾ ರ್ಕಲತೋಟ ವೀರೇ ಶ್, ಕೆಪಿಸಿಸಿ ರಾಜ್ಯ ಮಹಿಳಾ ಪ್ರಧಾನ ಕಾರ್ಯದರ್ಶಿ ಶ್ರೀಮತಿ ಪದ್ಮಾವತಿ, ಬಳ್ಳಾರಿ ಜಿಲ್ಲಾ ಪ್ರಚಾರ ಸಮಿತಿ ಅಧ್ಯಕ್ಷರು ಬಿ.ಎಂ.ಪಾಟೀಲ್, ಸುರೇಶ್ ಮತ್ತು ಕಾರ್ಯಕರ್ತರು ಉಪಸ್ಥಿತರಿದ್ದರು.

ಏ.30 ರಂದು ಮತಗಟ್ಟೆ ಅಧಿಕಾರಿಗಳಿಗೆ ತರಬೇತಿ

ವಿಜಯಪುರ ಏ .- : ಲೋಕಸಭೆ ಸಾರ್ವತ್ರಿಕ ಚುನಾವಣೆ-2024ರ ಸಲುವಾಗಿ ಪ್ರಿಸೈಡಿಂಗ್, ಸಹಾಯಕ ಪ್ರಿಸೈಡಿಂಗ್ ಮತ್ತು ಪೋಲಿಂಗ್ ಅಧಿಕಾರಿಗಳಿಗೆ ಏಪ್ರಿಲ್ 30 ರಂದು ಬೆಳಗ್ಗೆ 9.30 ರಿಂದ ತರಬೇತಿ ಏರ್ಪಡಿಸಲಾಗಿದೆ.

ಮುದ್ದೇಬಿಹಾಳ ಮತಕ್ಷೇತ್ರ ಸಂಬಂಧಿಸಿದ ಮತಗಟ್ಟೆ ಅಧಿಕಾರಿಗಳಿಗೆ ಮುದ್ದೇಬಿಹಾಳ ಎಮ್.ಜಿ.ವಿ.ಸಿ ಕಾಲೇಜು ನಲ್ಲಿ, ದೇವರ ಹಿಪ್ಪರಗಿ ಕ್ಷೇತ್ರದ ಅಧಿಕಾರಿಗಳಿಗೆ ದೇವರ ಹಿಪ್ಪರಗಿ ಶ್ರೀ ಸಿದ್ದೇಶ್ವರ ಸ್ವಾಮೀಜಿ ಪ್ರಾಥಮಿಕ ಹಾಗೂ ಪ್ರೌಡ ಶಾಲೆ, ಬಸವನ ಬಾಗೇವಾಡಿ ಮತಕ್ಷೇತ್ರಕ್ಕೇ ಬಸವನ ಬಾಗೇವಾಡಿ ಬಸವೇಶ್ವರ ಪಿಯು ಕಾಲೇಜು , ಬಬಲೇಶ್ವರ ಮತ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಬಬಲೇಶ್ವರ ಶಾಂತವೀರ ಪ್ರೌಡಶಾಲೆ ಮತ್ತು ಪಿ ಯು ಕಾಲೇಜು, ವಿಜಯಪುರ ನಗರ ಮತ ಕೆತ್ರದ ಅಧಿಕಾರಿಗಳಿಗೆ

ವಿ ವಿ ದರಬಾರ ಪ್ರೌಡ ಶಾಲೆ ಹಾಗೂ ಪಿಯು ಕಾಲೇಜು, ವಿಜಯಪುರನಲ್ಲಿ, ನಾಗಠಾಣ ಮತಕ್ಷೆತ್ರಕ್ಕೆ ಪಿಡಿಜೆ ಪ್ರೌಡ ಶಾಲೆ ವಿಜಯಪುರ, ಇಂಡಿ ಮತಕ್ಷೇತ್ರಕ್ಕೆ ಇಂಡಿ ಸರ್ಕಾರಿ ಆದರ್ಶ ವಿದ್ಯಾಲಯದಲ್ಲಿ, ಸಿಂದಗಿ ಮತಕ್ಷೇತ್ರದ ಅಧಿಕಾರಿಗಳಿಗೆ ಸಿಂದಗಿ ಆರ್ ಡಿ. ಪಾಟೀಲ್ ಹಾಗೂ ಜೆ ಪಿ ಪೊರವಾಲ್ ಕಾಲೇಜಿನಲ್ಲಿ ತರಬೇತಿ ಹಮ್ಮಿಕೊಳ್ಳಲಾಗಿದೆ.

ಚುನಾವಣೆ ಕರ್ತವ್ಯಕ್ಕೆ ನಿಯೋಜನೆಗೊಂಡ ಪ್ರಿಸೈಡಿಂಗ್, ಸಹಾಯಕ ಪ್ರಿಸೈಡಿಂಗ್ ಹಾಗೂ ಪೋಲಿಂಗ್ ಅಧಿಕಾರಿಗಳು ತರಬೇತಿಗೆ ಕಡ್ಡಾಯವಾಗಿ ಹಾಜರು ಇರಬೇಕು ಎಂದು ಚುನಾವಣೆ ಅಧಿಕಾರಿಯೂ ಆದ ಜಿಲ್ಲಾಧಿಕಾರಿ ಟಿ. ಭೂಬಾಲನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೋ.ಶಿವಾಪೂರ ಗ್ರಾಮದಲ್ಲಿ ವೃದ್ದರು, ವಿಕಲಚೇತನರ ಮತಧಾನ ನಡಯಿತು

ಯರಗಟ್ಟಿ : 2024 ರ ಲೋಕಸಭಾ ಚುಣಾವನಾ ನಮಿತ್ತವಾಗಿ ಗುರುವಾರ ದಿ.25ರಂದು ಸಮೀಪದ ಕೋ.ಶಿವಾಪುರ ಗ್ರಾಮದಲ್ಲಿ ನಡೆದಾಡಲು ಬಾರದ ವೃದ್ದರು, ಮಹಿಳೆಯರು, ವಿಕಲಚೇತಣರು. ತಮ್ಮ ಅಭ್ಯರ್ಥಿಗಳಿಗೆ ಮತಧಾನ ಮಾಡಿದರು. ಈ ಸಂದರ್ಭದಲ್ಲಿ ಚುನಾವಣಾ ಅಧಿಕಾರಿ ಕೆ ಬಿ ಸಜ್ಜನಶೆಟ್ಟಿ, ಶಟ್ಟರ್ ಆಪಿಸರ್ ಮಹೇಶ ಪಾಟೀಲ, ಬಿಎಲ್ ಓ ಗಳಾದ ಪ್ರಭು ದೆಯನ್ನವರ, ಕುಶಾಲ ಶೆಟ್ಟಿ ಇದ್ದರು. ಈ ಎಲ್ಲ ಅಧಿಕಾರಿಗಳ ಸಮ್ಮುಖದಲ್ಲಿ ಗ್ರಾಮದ ವೃದ್ದೆ ಮಹಾದೇವಿ ಶಿವಲಿಂಗಯ್ಯಾ ವಸ್ತ್ರದ ಮತಧಾನ ಮಾಡಿದರು.

ಬಿಜೆಪಿಯವರ ಸೊಕ್ಕು ಮುರಿಯಿರಿ-ಶಾಸಕ ನಾರಾ ಭರತ್ ರೆಡ್ಡಿ

ಬಳ್ಳಾರಿ, ಏ-:ಚುನಾವಣೆಯಲ್ಲಿ ಸೋಲಿಸುವ ಮೂಲಕ ಗ್ಯಾರಂಟಿ ಯೋಜನೆಗಳನ್ನು ಬಿಟ್ಟಿ ಭಾಗ್ಯ ಎನ್ನುವ ಬಿಜೆಪಿಯವರ ಸೊಕ್ಕನ್ನು ಮುರಿಯಬೇಕು ಎಂದು ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಹೇಳಿದರು.ಬಳ್ಳಾರಿ ಲೋಕಸಭಾ ಚುನಾವಣೆ ಹಿನ್ನೆಲೆ ಕಾಂಗ್ರೆಸ್ ಅಭ್ಯರ್ಥಿ ಈ.ತುಕಾರಾಂ ಅವರ ಪರ ಬಳ್ಳಾರಿಯ 15ನೇ ವಾರ್ಡಿನ ಕಾಟೇಗುಡ್ಡದ ಬಳಿ ಕೆಸಿ ರಸ್ತೆಯಲ್ಲಿ ಮತ ಯಾಚಿಸಿ ಮಾತನಾಡಿದರು. ಬಿಜೆಪಿಯವರು ದೇಶದ ಇಬ್ಬರು ಅತಿ ಶ್ರೀಮಂತರ ಸಾಲ ಮನ್ನಾ ಮಾಡುತ್ತಾರೆ, ಆದರೆ ಬಡವರಿಗೆ ಒಂದು ರೂಪಾಯಿ ಕೊಡುವುದಿಲ್ಲ, ಶ್ರೀಮಂತರ ಉದ್ಧಾರ ಮಾಡುವುದು ಬಿಜೆಪಿಯವರಿಗೆ ಮುಖ್ಯ, ಆದರೆ ಬಡವರ ಅಭಿವೃದ್ಧಿ ಅವರಿಗೆ ಬೇಕಾಗಿಲ್ಲ ಎಂದರು.ಕೊಟ್ಟ ಮಾತಿನಂತೆ ಗ್ಯಾರಂಟಿ ಭರವಸೆ ಈಡೇರಿಸಿದ್ದೇವೆ, ಬಿಜೆಪಿಯವರು ನಮಗೆ ಕೊಟ್ಟಿರುವ ಸವಲತ್ತು ಕಸಿಯುವ ಆಡ್ಯಂತ್ರ ಮಾಡಿದ್ದಾರೆ ಎಂದು ಹೇಳಿದ ಅವರು, ಕಾಟೇಗುಡ್ಡದ ಅಭಿವೃದ್ಧಿಗೆ ಆರೂವರೆ ಕೋಟಿ ರೂ. ಅನುದಾನವನ್ನು ಮಂಜೂರು ಮಾಡಿಸಿರುವೆ, ರಾಯಲ್ ವೃತ್ತದಿಂದ ಅನಂತಪುರ ರಸ್ತೆ ಅಭಿವೃದ್ಧಿಗೆ ಅನುದಾನ ಮಂಜೂರು ಮಾಡಿಸಿರುವೆ ಎಂದರು.ಕಾಟೇಗುಡ್ಡ ನಮ್ಮದಲ್ಲ, ನನ್ನದು, ಇದರ ಅಭಿವೃದ್ಧಿ ನನ್ನ ಕರ್ತವ್ಯ ಎಂದ ಶಾಸಕ ಭರತ್ ರೆಡ್ಡಿ, ವಿಧಾನಸಭೆ ಚುನಾವಣೆ ಮುಗಿದ ಮೇಲೆ ನಮ್ಮ ಕೆಲಸ ಮಾಡಿರುವೆ, ನಾನು ಸುಮ್ಮನೇ ಇಲ್ಲಿಗೆ ಬಂದಿಲ್ಲ, ನೀವು ನನ್ನ ಹತ್ತಿರ ಬಂದಾಗ ನಮ್ಮ ಕೆಲಸ ಮಾಡಿರುವೆ ಎಂದರು.

ಈಗಿನ ಬಿಜೆಪಿ ಅಭ್ಯರ್ಥಿ ಈ ಹಿಂದೆ ಸಂಸದರಾಗಿದ್ದವರು, ಅವರಿಗೆ ನೀವು ಪ್ರಶ್ನೆ ಮಾಡಬೇಕು, ಹಿಂದೆ ಸಂಸದರಾಗಿದ್ದಾಗ ಏನು ಕೆಲಸ ಮಾಡಿದ್ದೀರಿ? ಸಂಸತ್ತಿನಲ್ಲಿ ಏನು ಪ್ರಶ್ನೆ ಮಾಡಿದ್ದೀರಿ? ಎಂದು ಪ್ರಶ್ನಿಸಬೇಕು, ರಾಜಕೀಯ ಪುನರ್ಜನ್ಮ ನೀಡಬೇಕೆಂದು ಕೇಳುತ್ತಿದ್ದಾರೆ, ಎಳ್ಳು ಸಲ ಪುನರ್ಜನ್ಮ ನೀಡುವುದು? ಎಂದು ಅವರು ಪ್ರಶ್ನಿಸಿದರು.ಮತ್ತೊಬ್ಬರು ದೇವೇಂದ್ರಪ್ಪ ಅವರು ಸಂಸದರಾಗಿದ್ದರು, ಆದರೆ ಅವರು ಸಂಸತ್ತಿಗೇ ಹೋಗಿಲ್ಲ. ಇಂತವರನ್ನು ಬೆಂಬಲಿಸುವ ಬದಲು ಪ್ರಜ್ಞಾವಂತ ಜನಪರ ನಾಯಕ ಈ.ತುಕಾರಾಂ ಅವರಿಗೆ ಮತ ನೀಡಿ ಎಂದು ಭರತ್ ರೆಡ್ಡಿ ಹೇಳಿದರು.

ಬಿಜೆಪಿಯವರು ಹತ್ತು ವರ್ಷಗಳಿಂದ ಕೇಂದ್ರ ಸರ್ಕಾರದಲ್ಲಿ ಇದ್ದಾರೆ. ಜಿಲ್ಲೆಗೆ ಅವರು ಈವರೆಗೆ ಒಂದೇ ಒಂದು ಕಾರ್ಖಾನೆ ತರಲಿಲ್ಲ ಎಂದ ಅವರು, ಜಿಲ್ಲೆಯಲ್ಲಿರುವ ಕಾರ್ಖಾನೆಗಳೆಲ್ಲವೂ ಕಾಂಗ್ರೆಸ್ ಸರ್ಕಾರ ಇದ್ದ ಕಾಲದಲ್ಲಿ ಸ್ಥಾಪನೆ ಆದಂತವು ಎಂದರು.ಪಾಲಿಕೆ ಸದಸ್ಯ ನೂರ್ ಮೊಹಮ್ಮದ್, ಶೋಭಾ, ಬಳ್ಳಾರಿ ಖಾದರ್, ಸೂರಿ, ರಾಮುಡು, ಶಂಕರ್, ಅನು, ಜಾನ, ಮಧು ಮೊದಲಾದವರು ಹಾಜರಿದ್ದರು.

ಮೇಡ್ ಫಾರ್ ಈಚ್ ಅದರ್

ಇವರು ಇತರ ಮಹಿಳೆ(ಮಡದಿ)ಯರಿಗೂ ಮಾದರಿ

ವಿಜಯಪುರ-:ಪ್ರತಿಯೊಬ್ಬ ಗಂಡಿನ ಯಶಸ್ಸಿನ ಹಿಂದೆ ಒಂದು ಹೆಣ್ಣು ಇದ್ದೇ ರ್ತಾಳೆ ಅನ್ನೋ ಮಾತಿದೆ. ಅದರಂತೆ ಯಶಸ್ವಿ ಹೆಂಡತಿಗೆ ಆಕೆಯ ಗಂಡನ ಸಾಥ್ ಬೇಕೇ ಬೇಕಾಗುತ್ತದೆ. ಈ ಮಾತಿಗೆ ಸ್ಯಾಡಲ್‌ವುಡ್‌ನ ಕೆಲವು ನಾಯಕ ನಟರ ಮುದ್ದಿನ ಮಡದಿಯರು ಬೇರೆ ಬೇರೆ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಯಶಸ್ಸು ಗಳಿಸಿದ್ದಾರೆ. ಅಂತೆಯೇ ಯಶಸ್ಸು ಗಳಿಸಿರುವ ಈ ನಟರಿಗೆ ಅವರ ಪತ್ನಿಯ ಬೆಂಬಲವು ಬಹಳ ದೊಡ್ಡದು ಎಂದು ಬಣ್ಣಿಸಲಾಗುತ್ತದೆ. ಇದರಿಂದಲೇ ಅವರು "ಮೇಡ್ ಫಾರ್ ಈಚ್ ಅದರ್" ಎಂದೇ ಕರೆಸಿಕೊಳ್ಳುತ್ತಾರೆ.

ಸದಾ ಸಿನಿಮಾ ಕೆಲಸಗಳಲ್ಲಿ ಬ್ಯುಸಿಯಾಗಿರುವ ತಮ್ಮ ಪತಿಯ ಸಿನಿಮಾ ಕೆಲಸಗಳು, ದಿನಚರಿ ಸೇರಿದಂತೆ ಅನೇಕ ಕೆಲಸಗಳಲ್ಲಿ ಸಹಕರಿಸುವ ಇವರು "ಇಚ್ಛೆಯರಿತು ನಡೆವ ಸತಿ ಇರಲು ಸ್ವರ್ಗಕ್ಕೆ ಕಿಚ್ಚು ಹಚ್ಚೆಂದ" ಸರ್ವಜ್ಞನ ಮಾತಿಗೆ ಇವರು ಅಕ್ಷರಶಃ ಸಾಕ್ಷಿಯಾಗಿದ್ದಾರೆ. ಅಲ್ಲದೇ ಬೇರೆ-ಬೇರೆ ಕ್ಷೇತ್ರದಲ್ಲಿಯೂ ತಮ್ಮನ್ನು ಕ್ರಿಯಾಶೀಲರಾಗಿ ತೊಡಗಿಕೊಂಡಿದ್ದಾರೆ. ಗಂಡ, ಮಕ್ಕಳು ಸಂಸಾರದ ಜವಾಬ್ದಾರಿಯ ಜೊತೆಗೆ ತಮಗೆ ಆಸಕ್ತಿಯಿರುವ ಕೆಲಸಗಳಲ್ಲಿ ತೊಡಗಿಕೊಂಡು ನಾವು ಯಾರಿಗೂ ಕಮ್ಮಿ ಇಲ್ಲ, ಅಂತೆಯೇ "ಹೆಣ್ಮಕ್ಳು ಸ್ಟ್ರಾಂಗು ಗುರೂ" ಎಂಬುದನ್ನು ಅಕ್ಷರಶಃ ಪ್ರೂವ್ ಮಾಡಿ ತೋರಿಸಿದ್ದಾರೆ. ಈ ಮೂಲಕ ಅವರು ಇತರ ಮಹಿಳೆ(ಮಡದಿ)ಯರಿಗೂ ಮಾದರಿಯಾಗಿದ್ದಾರೆ.

ಸ್ಯಾಂಡಲ್‌ವುಡ್‌ನಲ್ಲಿ ಎಲ್ಲರ ಪ್ರೀತ್ಯಾಭಿಮಾನದ ಗೀತಕ್ಕ ಎಂದೇ ಕರೆಸಿಕೊಳ್ಳುವ ದೊಡ್ಮನೆಯ ದೊಡ್ಡ ಸೊಸೆ ಗೀತಾ ಶಿವರಾಜ್‌ಕುಮಾರ್ ಅವರು ಶಿವಣ್ಣನ ಸಿನಿಬದುಕಿಗೆ ಆಕ್ಸಿಜನ್ ಇದ್ದಂತಿದ್ದಾರೆ. ಕನ್ನಡ ಕುಲತಿಲಕ ಎನಿಸಿರುವ ವರನಟ ಡಾ.ರಾಜಕುಮಾರ್ ಅವರು ಹಿರಿಮಗನಾದ ಶಿವರಾಜ್‌ಕುಮಾರ್ ಅವರ ಬದುಕಿನಲ್ಲಿ ಅವರ ಪತ್ನಿ ಗೀತಾ ಅವರ ಪಾತ್ರ ಬಹಳ ದೊಡ್ಡದು. ಶಿವಣ್ಣನ ಸಿನಿಮಾಗಳು, ಲುಕ್, ಸ್ಟೋರಿ, ಫಿಟ್‌ನೆಸ್, ಕಾಸ್ಟ್ಯೂಮ್‌ಗಳ ಬಗ್ಗೆ ಮಾತ್ರವಲ್ಲದೇ ವಯಕ್ತಿಕವಾಗಿಯೂ ಗೀತಾ ಅವರು ಶಿವಣ್ಣನಿಗೆ ಅಗತ್ಯ ಸಲಹೆಗಳನ್ನು ನೀಡುತ್ತಾರೆ.

ಗೀತಕ್ಕನಿಗೆ ರಾಜಕೀಯದಲ್ಲಿ ತುಂಬಾ ಆಸಕ್ತಿಯಿದೆ. ರಾಜಕೀಯ ಹಿನ್ನೆಲೆಯಿಂದಲೇ ಬಂದಿರುವ, ಮಾಜಿ ಸಿಎಂ ದಿ.ಎಸ್.ಬಂಗಾರಪ್ಪನವರ ಪುತ್ರಿಯೂ ಆಗಿರುವ ಗೀತಕ್ಕ ಅವರು 2014ರಲ್ಲಿ ಶಿವಮೊಗ್ಗ ಲೋಕಸಭಾ ಕ್ಷೇತ್ರದಿಂದ ಚುನಾವಣೆಗೆ ಸ್ಪರ್ಧಿಸಿ ಪರಾಜಯಗೊಂಡಿದ್ದರು.

ಈ ವರ್ಷವೂ ಕೂಡ ಗೀತಕ್ಕ ಶಿವಮೊಗ್ಗ ಕ್ಷೇತ್ರದಿಂದಲೇ ಮತ್ತೆ ಲೋಕಸಭಾ ಚುನಾವಣೆಗೆ ಸ್ಪರ್ಧಿಸಿದ್ದು, ಸದ್ಯ ಕಾಲಿಗೆ ಚಕ್ರ ಕಟ್ಟಿಕೊಂಡವರಂತೆ ಭರ್ಜರಿ ಪ್ರಚಾರ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಕೊಂಡಿದ್ದಾರೆ. ಶಿವಣ್ಣ ಕೂಡ ಗೀತಕ್ಕನಿಗೆ ಸಾಥ್ ನೀಡುತ್ತಿದ್ದಾರೆ. ಗೀತಕ್ಕನಿಗೆ ಶಿವಣ್ಣ ಬೆನ್ನೆಲುವಾಗಿ ನಿಂತಿದ್ದಾರೆ. ಇವರದೊಂದು ಯಶಸ್ವಿ ಹಾಗೂ ಸುಧೀರ್ಘ ದಾಂಪತ್ಯ ಎಂದೇ ಬಣ್ಣಿಸಲಾಗುತ್ತದೆ. ಆದ್ದರಿಂದಲೇ ಇಂದಿನ ತಲೆಮಾರಿನ ಯುವಜೋಡಿಗಳಿಗೆ ಇವರು ಆದರ್ಶವಾಗಿದ್ದಾರೆ.

ಶಿವರಾಜ್‌ಕುಮಾರ್ ಅವರ ಸಹೋದರ ಕರ್ನಾಟಕ ರತ್ನ, ದಿವಂಗತ ಡಾ.ಪುನೀತ್ ರಾಜ್‌ಕುಮಾರ್ ಅವರ ಪತ್ನಿ ಅಶ್ವಿನಿ ಅವರು ಕೂಡ ಮೊದಲಿನಿಂದಲೂ ಪತಿಯ ಕೆಲಸಗಳಿಗೆ ಸಾಥ್ ನೀಡುತ್ತಲೇ ಬಂದಿದ್ದರು. ಪ್ರೀತಿಸಿ ಮದುವೆಯಾಗಿದ್ದ ಪುನೀತ್ ತಮ್ಮ ಮುದ್ದಿನ ಮಡದಿಯನ್ನು ಬಹಳ ಪ್ರೀತಿಸುತ್ತಿದ್ದರು. ಆದರೆ, ಈ ಹಿಂದೆ ಅಶ್ವಿನಿ ಅವರು ಕ್ಯಾಮರಾ ಮುಂದೆ ಹೆಚ್ಚು ಕಾಣಿಸಿಕೊಳ್ಳುತ್ತಿರಲಿಲ್ಲ.

ಅಪ್ಪು ಹತ್ತಾರು ಕನಸುಗಳನ್ನು ಕಂಡಿದ್ದರು. ಈ ನಿಟ್ಟಿನಲ್ಲಿ ಅವರು ತಮ್ಮ ಪತ್ನಿ ಅಶ್ವಿನಿ ಅವರ ಜೊತೆಗೂಡಿ ಹೊಸ ಪ್ರತಿಭೆಗಳು, ಯುವ ನಟರು ಹಾಗೂ ನಿರ್ದೇಶಕರಿಗೆ ಅವ